**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ**
**CC.No. 852/2021**
**CW : 01 PW: 01**
**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 27.06.2025**

| | |
|---|---|
| ಹೆಸರು | : ಅನೀಲ ಕಂಬನೂರು |
| ತಂದೆಯ ಹೆಸರು | : ಬಸ್ಸಣ್ಣಾ |
| ವಯಸ್ಸು | : 45 |
| ಉದ್ಯೋಗ | : ಪಂಪ ಆಪರೇಟರ |
| ವಾಸಸ್ಥಳ | : ಮರತೂರು |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನನಗೆ ಆರೋಪಿತನ ಪರಿಚಯ ಇರುತ್ತದೆ. ನನಗೆ ಚಾಸಾ-2, 3, 5, 6 ಮತ್ತು 7 ಇವರ ಪರಿಚಯ ಇರುತ್ತದೆ. ಚಾಸಾ-1 ನನ್ನ ಸಹೋದರ, ಚಾಸಾ-8 ನನ್ನ ಸಹೋದರಿ ಆಗಬೇಕು. ನಾನು ಮರತೂರಿನ ಗ್ರಾಮ ಪಂಚಾಯತಿಯಲ್ಲಿ ಪಂಪ ಆಪರೇಟರ ಎಂದು ಕಾರ್ಯ ನಿರ್ವಹಿಸುತ್ತಿದ್ದು, ಪಂಚಾಯತಿ ವತಿಯಿಂದ ಓಣಿಯಲ್ಲಿ ನೀರಿನ ಪೈಪನ್ನು ಹಾಕುವ ಸಮಯದಲ್ಲಿ ಆರೋಪಿತನ ಮನೆಯ ಎದುರು ಎರಡು ಪೈಪುಗಳು ಇದ್ದು ಇನ್ನೊಂದು ಹಾಕು ಎಂದು ಕೇಳಿದಲ್ಲಿ ನಾನು ಅವಾಗ ಈಗಾಗಲೇ ನಿಮ್ಮ ಮನೆಯ ಬಳಿ ಎರಡು ಪೈಪುಗಳು ಇದ್ದು ಅವಾಗ ಸದರಿ ಆರೋಪಿತನು ನಳವನ್ನು ಕೂಡಿಸಲು ಒತ್ತಾಯ ಮಾಡಿದ್ದು ಇರುತ್ತದೆ. ಸದರಿ ನಳವನ್ನು ಕೂಡಿಸಲು ನಾನು ನಿರಾಕರಿಸಿರುತ್ತೇನೆ.

ಈ ವಿಚಾರವಾಗಿ ಆರೋಪಿಯು ನನಗೆ ಕೈಯಿಂದ ಕಪಾಳಕ್ಕೆ ಹೊಡೆದಿದ್ದು, ನಂತರದಲ್ಲಿ ಸದರಿ ಆರೋಪಿತನ ಮಗನಾದ ಲೋಕೇಶ ಇವನು ನನಗೆ ಕೈಯಿಂದ ಹೊಡೆದಿದ್ದು ಇರುತ್ತದೆ. ಆರೋಪಿಯ ಇನ್ನೊಬ್ಬ ಮಗನಾದ ಶಿವಪುತ್ರ ಎಂಬುವವನು ಕಲ್ಲಿನಿಂದ ಹೊಟ್ಟೆಯ ಮಗ್ಗುಲಿಗೆ ಹೊಡೆದಿರುತ್ತಾನೆ. ನಂತರದಲ್ಲಿ ಲೋಕೇಶನ ಪತ್ನಿಯು ಬಂದು ನನಗೆ ಅವಾಚ್ಯ ಶಬ್ದಗಳಿಂದ ಬೈದಾಡಿರುತ್ತಾಳೆ.

ಸ್ಥಳದಲ್ಲಿ ಗ್ರಾಮ ಪಂಚಾಯತಿಗೆ ಸಂಬಂಧಿಸಿದ ವ್ಯಕ್ತಿಗಳು ಬಂದಿದ್ದು ಇರುತ್ತದೆ. ಆರೋಪಿತನ ಪರಿವಾರದವರು ನಿನ್ನನ್ನು ಹಾಗೂ ನಿನ್ನ ಪರಿವಾರದವರನ್ನು ಜೀವ ಬೆದರಿಕೆ ಹಾಕಿರುತ್ತಾರೆ. ನನ್ನ ಸಹೋದ್ಯೋಗಿ ಮತ್ತು ಅಣ್ಣಾ ಶಹಾಬಾದದ ಸರಕಾರಿ ಆಸ್ಪತ್ರೆಗೆ ಉಪಚಾರಕ್ಕಾಗಿ ಕರೆದುಕೊಂಡು ಬಂದಿದ್ದು ಇರುತ್ತದೆ. ಸದರಿ ಜಗಳದಲ್ಲಿ ಸಿದ್ರಾಮ, ಲೋಕೇಶ,

ಶಿವಪುತ್ರ ಮತ್ತು ಲೋಕೇಶನ ಪತ್ನಿಯು ಹಾಜರಿದ್ದರು. ಈ ಜಗಳವನ್ನು ಚಾಸಾ-4 ರಿಂದ 7 ರವರು ಬಿಡಿಸಿರುತ್ತಾರೆ. ನನ್ನ ಸಹೋದರನಿಗೂ ಸಹ ಲೋಕೇಶ ಎಂಬುವವನು ಹೊಡೆಬಡೆ ಮಾಡಿರುತ್ತಾನೆ. ಶಿವಪುತ್ರ ಎಂಬುವವನು ಚಾಸಾ-8 ಇವರಿಗೆ ಕಾಲಿನಿಂದ ಒದ್ದಿದ್ದು ಇರುತ್ತದೆ. ಜಗಳವನ್ನು ನಡೆಯುವ ಸಮಯದಲ್ಲಿ ಚಾಸಾ-8 ಇವರು ಸ್ಥಳಕ್ಕೆ ಬಂದಿದ್ದು, ಶಿವಪುತ್ರ ಎಂಬುವವರು ಹೊಡಿಬಡಿ ಮಾಡಿದ್ದು ಇರುತ್ತದೆ. ಸದರಿ ಜಗಳವು ದಿ: 12/02/2021 ರಂದು 2 ರಿಂದ 2.30 ಸುಮಾರಿಗೆ ಆಗಿರುತ್ತದೆ. ಈ ಜಗಳವು ಆರೋಪಿತನ ಮನೆಯ ಎದುರುಗಡೆ ನಡೆದಿರುತ್ತದೆ. ಸಾಕ್ಷಿದಾರನಿಗೆ ಒಂದು ಕಲ್ಲನ್ನು ತೋರಿಸಿದ್ದು, ಸದರಿ ಕಲ್ಲನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಮು.ಮಾ.1 ಎಂದು ನಿಶಾನೆಗೊಳಿಸಲಾಯಿತು. ಸಿದ್ರಾಮನು ಹೊರತುಪಡಿಸಿ ಬೇರೆ ಯಾರೂ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ.

ಮಾರನೇ ದಿನ ನಾನು ಪೋಲೀಸರಿಗೆ ದೂರು ನೀಡಿದ್ದು, ಸದರಿ ದೂರನ್ನು ನೋಡಿ ಸಾಕ್ಷಿದಾರರು ಗುರುತಿಸುತ್ತಾರೆ, ಅದನ್ನು ನಿ.ಪಿ.1 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.1 (ಎ) ಗುರುತಿಸಲಾಯಿತು. ಫಿರ್ಯಾದಿಯನ್ನು ನೀಡಿದ ಮಾರನೇ ದಿನ ಪಂಚನಾಮೆಯನ್ನು ಮಾಡಿರುತ್ತಾರೆ. ನಾನು ತೋರಿಸಿದ ಜಾಗೆಯಲ್ಲಿ ಪಂಚನಾಮೆಯನ್ನು ಮಾಡಿರುತ್ತಾರೆ. ಈ ವಿಚಾರವಾಗಿ ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೇಳಿದ್ದು ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**
**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**